ಸಾಲಿನ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ವಿಷಯ: ಹೊಸದುರ್ಗ ತಾಲ್ಲೂಕಿನಲ್ಲಿ ಹೊಸ ಆರಕ್ಷಕ ಠಾಣೆಗಳು.

869 (1214)

ಶ್ರೀ ಟಿ.ಹೆಚ್.ಬಸವರಾಜು (ಹೊಸದುರ್ಗ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಮೊಡದಕೆರೆಯು ಹೋಬಳಿ ಕೇಂದ್ರವಾಗಿದ್ದು ಮತ್ತು ತಾಲ್ಲೂಕಿನ ಗಡಿ ಭಾಗದಲ್ಲಿದ್ದು, ಒಂದು ಹೊಸ ಪೋಲೀಸ್ ಠಾಣೆಯನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು.

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ: ಬಾದಾಮಿ ಮತ ಕ್ಷೇತ್ರಕ್ಕೆ ಮಲಪ್ರಭಾ ಎಡದಂಡೆ ಕಾಲುವೆ

870 (1230)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಮತಕ್ಷೇತ್ರದ ಮಲಪ್ರಭಾ ಎಡದಂಡೆ ಕಾಲುವೆ ಮುಖಾಂತರ ನೀರು ಹರಿಯುವ ಪ್ರಮಾಣ ಎಷ್ಟು?

ಆ) ಕಾಲುವೆ ದುರಸ್ತಿಯಿಂದ ಪೂರ್ಣ ಪ್ರಮಾಣದ ನೀರನ್ನು ಬಿಡಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅಚ್ಚುಕಟ್ಟು ಪ್ರದೇಶದ ರೈತರಿಗೆ ತೊಂದರೆ ನಿವಾರಿಸಲು ಕಾಲುವೆ ರಿಪೇರಿಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಹಾಗಿದ್ದಲ್ಲಿ 1998-99ನೇ ಸಾಲಿನಲ್ಲಿ ಕಾಲುವೆ ದುರಸ್ತಿಗೆ ನಿರ್ದಿಷ್ಟವಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):

ಅ) ಬಾದಾಮಿ ಮತಕ್ಷೇತ್ರದ ಮಲಪ್ರಭಾ ಎಡದಂಡೆ ಕಾಲುವೆ ಮುಖಾಂತರ 402 ಕ್ಯೂಸೆಕ್ಸ್ ನೀರು ಹರಿಯುತ್ತದೆ.

ಆ) ಬಂದಿದೆ.

ಇ) ಅನುದಾನದ ಲಭ್ಯತೆ ಮೇರೆಗೆ ದುರಸ್ತಿ ಕೆಲಸಗಳನ್ನು ಆದ್ಯತೆ ಮೇಲೆ ಕೈಗೊಳ್ಳಲಾಗುವುದು.

ಈ) 1998-99ನೇ ಸಾಲಿಗಾಗಿ '2701' ಲೆಕ್ಕ ಶೀರ್ಷಿಕೆಯಲ್ಲಿ ಮಲಪ್ರಭಾ ಯೋಜನೆಗೆ ರೂ.645.68 ಲಕ್ಷ ಅನುದಾನ ಒದಗಿಸಲಾಗಿದೆ. ಕಾಮಗಾರಿಗಳ ಪ್ರಗತಿಯನ್ನನುಸರಿಸಿ ಹಣ ಬಿಡುಗಡೆ ಮಾಡಲಾಗುವುದು.

ವಿಷಯ: ಮಲಪ್ರಭಾ ಎಡದಂಡೆ ಕಾಲುವೆ 97ನೇ ಕಿ.ಮಿ.ದಲ್ಲಿ ಸೇತುವೆ ಕುರಿತು

871 (1235)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಎಡದಂಡೆ ಕಾಲುವೆ 97ನೇ ಕಿ.ಮಿ.ದಲ್ಲಿ ಸೇತುವೆ ಬಿದ್ದು ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಬಿದ್ದ ಸೇತುವೆ ಅಂದಾಜು ವೆಚ್ಚ ಎಷ್ಟು ಯಾವಾಗ ಸದರಿ ಸೇತುವೆ ಕಟ್ಟಿಸಲಾಗಿತ್ತು; ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆಯೇ;

ಇ) 1998-99ನೇ ಸಾಲಿನಲ್ಲಿಯೇ ರೈತರ ಅನುಕೂಲತೆಗೆ ಸೇತುವೆ ಕಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):

ಅ) ಬಂದಿದೆ.

ಆ) (ಹಳೆ) ಸೇತುವೆ ಅಂದಾಜು ವೆಚ್ಚ ರೂ.62,000-00 ಗಳಾಗಿತ್ತು ಮತ್ತು ಸದರಿ ಸೇತುವೆಯನ್ನು 1984ನೇ ಇಸ್ವಿಯಲ್ಲಿ ಕಟ್ಟಿಸಲಾಗಿತ್ತು. ಈ ಕುರಿತು ಇಲಾಖೆ ವಿಚಾರಣೆ ನಡೆಯುತ್ತಿದೆ.